ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರು ಸಂಸದೀಯ ವ್ಯವಹಾರಗಳ ಸಚಿವರು).—

ಅ) ನ್ಯಾಯಾಲಯ ಕಟ್ಟಡ ಸಿದ್ಧವಿದ್ದರೂ, ಪೀಠೋಪಕರಣ ಮೇದಿ ಮುಂತಾದವುಗಳು ಇಲ್ಲದಿದ್ದುರಿಂದ ನ್ಯಾಯಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಆಗಲಿಲ್ಲ.

ಆ) ಹೌದು ಲಭ್ಯವಿರುವ ಪೀಠೋಪಕರಣಗಳೊಂದಿಗೆ ನ್ಯಾಯಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಉಚ್ಚ ನ್ಯಾಯಾಲಯವನ್ನು ಕೋರಲಾಗುವುದು.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನಂಜನಗೂಡಿನಲ್ಲಿ ಜನತಾ ನ್ಯಾಯಾಲಯದ ಪ್ರಾರಂಭೋತ್ಸವಕ್ಕೆ ಬಂದಿದ್ದಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಒಂದು ನಿರ್ದಿಷ್ಟವಾದಂಥ ನಿರ್ದೇಶನವನ್ನು ನೀಡಿದ್ದರು. ಈಗಾಗಲೇ ನಂಜನಗೂಡಿನಲ್ಲಿ ನ್ಯಾಯಾಲಯಕ್ಕಾಗಿ ಬಿಲ್ಡಿಂಗ್ ಕಟ್ಟಿ ಒಂದು ವರ್ಷವಾಗಿದೆ. ಈಗಿರತಕ್ಕ ಪೀಠೋಪಕರಣಗಳನ್ನೇ ಆ ಕಟ್ಟಡದಲ್ಲಿ ಹಾಕಿ ಹೊಸ ಕಟ್ಟಡವನ್ನು ಪ್ರಾರಂಭೋತ್ಸವವನ್ನು ಮಾಡಬೇಕೆಂದು ಆದೇಶ ನೀಡಿದ್ದರೂ ಕೂಡ ಅಧಿಕಾರಿಗಳೂ ಆ ಆದೇಶವನ್ನು ಪಾಲಿಸಲಿಲ್ಲ. ಕಟ್ಟಡವು ಮಳೆಗಾಳಿಗೆ ಸಿಕ್ಕಿ ಮೇಂಟೆನೆನ್ಸ್ ಇಲ್ಲದೆ ಹಾಳಾಗುತ್ತಿದೆ. ದಯವಿಟ್ಟು ಕೂಡಲೇ ಅಧಿಕಾರಿಗಳಿಗೆ ಆದೇಶವನ್ನು ನೀಡಿ ಈಗ ಕಟ್ಟಿರತಕ್ಕ ಹೊಸ ಕಟ್ಟಡವನ್ನು ಉಪಯೋಗಿಸಬೇಕೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಜೊತೆಗೆ ಈಗಾಲೇ ಅಪಲೇಟ್ ಟ್ರಿಬ್ಯೂನಲ್ ಕಛೇರಿಗೆ ಸ್ಥಳ ಇಲ್ಲದೆ ಬಿ ಡಿ.ಓ. ಕಛೇರಿಯಲ್ಲಿ ತನ್ನ ಕೆಲಸವನ್ನು ಮಾಡ ಬೇಕಾಗಿ ಬಂದಿದೆ. ಈಗ ಕಟ್ಟಿರುವ ಹೊಸ ಕಟ್ಟಡಕ್ಕೆ ನ್ಯಾಯಾಲಯವನ್ನೂ ವರ್ಗಾವಣೆ ಮಾಡುವುದರಿಂದ ಹಳೆಯ ಕಟ್ಟಡ ಖಾಲಿ ಆಗುತ್ತದೆ. ಈ ಖಾಲಿಯಾಗುವ ಕಟ್ಟಡದಲ್ಲಿ ಅಪಲೇಟ್ ಟ್ರಿಬ್ಯೂನಲ್ ಕಛೇರಿಯನ್ನು ನಡೆಸಬಹುದು. ಮಾನ್ಯ ಮಂತ್ರಿಯವರು ಈ ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಳೆಯ ಕಟ್ಟಡದಿಂದ ಹೊಸ ಕಟ್ಟಡಕ್ಕೆ ಬೇಗ ನ್ಯಾಯಾಲಯವನ್ನು ವರ್ಗಾವಣೆ ಮಾಡುವ ಕೆಲಸವನ್ನು ಮಾಡಬೇಕೆಂದು ನಾನು ಹೈಕೋರ್ಟಿನವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ರಾಯಚೂರಿನಲ್ಲಿರುವ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ

೧೪೮೮. ಶ್ರೀ ಮಹಮ್ಮದ್ ಉಮರ್ (ರಾಯಚೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ರಾಯಚೂರು ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಗಳನ್ನು ಯಾವಾಗ ಹೆಚ್ಚಿಸುವುದು?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಆಯವ್ಯಯದಲ್ಲಿ ಸಾಕಷ್ಟು ಹಣ ಲಭ್ಯವಾದಾಗ

SRI MOHAMED OMAR.—I want a particular date within which the Government would increase the bed strength in the Civil Hoipital at Raichur.

ಶ್ರೀ ಬಿ. ರಾಚಯ್ಯ.—ಬೆಡ್‌ಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ನಿರ್ದಿಷ್ಟವಾದ ದಿನಾಂಕವನ್ನು ಕೊಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಆದಕ್ಕೆ ಬೇಕಾಗತಕ್ಕಂಥ ಅಡಿಷನಲ್ ರಿಕ್ವಾಯರ್‌ಮೆಂಟ್ ಏನೇನು ಬೇಕಾಗುತ್ತದೆ ಎಂಬುದನ್ನು ನೋಡಿಕೊಂಡು ಒಂದು ಲೆಕ್ಕಾಚಾರವನ್ನು ಹಾಕುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಆಲ್ಲಿ ೨೨೦ ಬೆಡ್‌ಗಳು ಇದೆ. ಅವನ್ನು ೦೬೦ ಬೆಡ್‌ಗಳನ್ನಾಗಿ ಮಾಡುವುದಕ್ಕೆ ಲೆಕ್ಕ ಹಾಕಿದರೆ, ಅಂದರೆ ಆದಕ್ಕೆ ಬೇಕಾಗುವ ಸಿಬ್ಬಂದಿ ಇತ್ಯಾದಿಗಳ ಲೆಕ್ಕ ಹಾಕಿದರೆ ೧೯.೪೩ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಹಾಗೆಯೇ ಡಯೆಟ್, ಡ್ರೆಸ್, ಸ್ಟಾಫ್, ಇತ್ಯಾದಿಗಳಿಗೆ ೨೭.೩ ಲಕ್ಷ ರೂಪಾಯಿಗಳ ಬೇಕಾಗುತ್ತವೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮುಂದಿನ ವರ್ಷ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಿಬ್ಬಂದಿ ವೇತನಕ್ಕೆ ೮.೭೪ ಲಕ್ಷ ರೂಪಾಯಿ

ಗಳು ಬೇಕಾಗುತ್ತವೆ. ಆಹಾರ ಪದಾರ್ಥಗಳಿಗೆ ೧.೨೦ ಲಕ್ಷ ಬೇಕಾಗುತ್ತದೆ. ಔಷಧಿ ಇತ್ಯಾದಿಗಳಿಗೆ ೨.೨೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಹೀಗೆ ಹೆಚ್ಚುವರಿ ಬೇಕಾಗುವ ಹಣದ ಖರ್ಚುಗಳನ್ನು ಲೆಕ್ಕ ಹಾಕಿ ನೋಡಿದರೆ ಇನ್ನೂ ೧೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅದನ್ನು ಮುಂದಿನ ವರ್ಷದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕ.ರಾ.ರ.ಸಾ. ಸಂಸ್ಥೆಯಿಂದ ಅಧಿಕ ವೆಚ್ಚ

೧೩೮೨. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸಿರುವ ರಸ್ತೆ ದಿಬ್ಬಗಳಿಂದ ರಾಜ್ಯ ರಸ್ತೆ ಸಾರಿಗೆ ವಾಹನಗಳಲ್ಲಿ ಅಧಿಕ ಖರ್ಚು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕೆ.ಎಸ್.ಆರ್.ಟಿ.ಸಿ. ಗ್ಯಾರೇಜ್‌ನಲ್ಲಿ ಸರ್ಕಾರಿ ವಾಹನಗಳ ನಾಲ್ಕು ಟೈರು ಟ್ಯೂಬುಗಳನ್ನು ಬದಲಾಯಿಸಲು ತಗಲುವ ವೆಚ್ಚವೆಷ್ಟು? ಖಾಸಗೀಯಾಗಿ ಮಾಡಿಸಿದರೆ ತಗಲುವ ವೆಚ್ಚವೆಷ್ಟು?

ಇ) ಕರ್ನಾಟಕ ರಾಜ್ಯ ರಸ್ತೆ ವಾಹನದಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರಿಗೆ (ದೂರ-ಪ್ರಯಾಣ) ಅವರು ಪಡೆಯುವ ಟಿಕೇಟಿನ ಆಧಾರದ ಮೇಲೆ ಜೀವವಿಮೆ ಮಾಡಿಸಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ರಾಷ್ಟ್ರೀಯ ಹೆದ್ದಾರಿಗಳೇ ಅಲ್ಲದೆ ರಾಜ್ಯ ಹೆದ್ದಾರಿಗಳೂ ಇತರೆ ಅಪಘಾತ ಸರಣ ಎಂದು ಘೋಷಿಸಲಾದ ಶಾಲಾ ಆವರಣ, ಲೆವೆಲ್ ಕ್ರಾಸಿಂಗ್ ಮತ್ತು ಇತರೆ ರಸ್ತೆಗಳಲ್ಲಿ ಅಪಘಾತಗಳನ್ನು ತಡೆಯುವ ಉದ್ದೇಶದಿಂದ ವಾಹನಗಳ ವೇಗವನ್ನು ಮಿತಿಗೊಳಿಸಲು ದಿಬ್ಬಗಳನ್ನು ರಚಿಸಿರುತ್ತಾರೆ. ಇದ್ದರಿಂದ ವಾಹನಗಳು ನಿಂತು ನಿಧಾನವಾಗಿ ಚಲಿಸುವುದರಿಂದ ಇಂಧನ ವ್ಯಯ ಸ್ವಲ್ಪ ಮಟ್ಟಿಗೆ ಹೆಚ್ಚುವುದು. ಆದರೆ ಇದು ಅತಿ ಅಲ್ಪ ಪ್ರಮಾಣದ್ದು ಮತ್ತು ನಿರ್ಲಕ್ಷಿಸಬಹುದಾದುದು ಆಗಿರುತ್ತದೆ.

ಈ ಒಂದು ನಿಬಂಧನೆ ಎಲ್ಲಾ ಸಾರ್ವಜನಿಕ ಹಾಗೂ ಖಾಸಗೀ ವಾಹನಗಳಿಗೂ ಅನ್ವಯಿಸುವ ಪ್ರಯುಕ್ತ. ಇದಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳು ಹೊರತಾಗಿಲ್ಲ ಮತ್ತು ಹೆಚ್ಚಿನ ವೆಚ್ಚ ಭರಿಸುವುದು ಅನಿವಾರ್ಯ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗ್ಯಾರೇಜ್‌ನಲ್ಲಿ ಟೈರು, ಟ್ಯೂಬುಗಳನ್ನು ಬದಲಾಯಿಸುವ ಕೆಲಸ ನಿರ್ವಹಣೆಯ ಅಂಗವಾಗಿ ತನ್ನದೇ ಆದ ಕಾರ್ಯಾಗಾರದಲ್ಲಿ ಅದಕ್ಕಾಗಿ ನೇಮಿಸಲ್ಪಟ್ಟ ಸಿಬ್ಬಂದಿಯಿಂದ ಕೈಗೊಳಾಗುತ್ತಿದೆ.

ಟೈರು ಟ್ಯೂಬುಗಳನ್ನು ಬದಲಾಯಿಸಲು ಪ್ರತಿ ವಾಹನಕ್ಕೆ ತಗಲುವ ವೆಚ್ಚ ಈ ಕೆಳಕಂಡಂತಿದೆ,—

	ರೂ.	ಪೈಸೆ
ಮುಂಭಾಗದ ಹೊಸ ಟ್ಯೂಬು ಮತ್ತು ಫ್ಲಾಪ್ ಸಹಿತ ೨ ಟೈರುಗಳ ವೆಚ್ಚ.	೪೭೨೨	೦೦
ಮುಂಭಾಗದ ಹೊಸ ಟ್ಯೂಬ್ ಮತ್ತು ಫ್ಲಾಪ್ ಸಹಿತ ೨ ಟೈರುಗಳ ವೆಚ್ಚ ಹಿಂಬದಿ ಚಕ್ರಗಳ ನಾಲ್ಕು ಸಂಸ್ಕರಿಸಿದ ಟೈರುಗಳ ಬೆಲೆ	೨೦೫೧	೦೦
ಒಬ್ಬ ಮೆಕ್ಯಾನಿಕ್, ಒಬ್ಬ ಸಹಾಯಕ ಇವರುಗಳಿಗೆ ಟೈರುಗಳನ್ನು ಸಿದ್ಧಪಡಿಸಿ ಜೋಡಿಸಲು ಬಂದು ಘಂಟೆಯ ಮಂಜೂರಿ.	೧೦	೫೦
ಮೊತ್ತ	೧೦೮೩೩	೫೦